## ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಎಡಿಎಂ.2[2]ಕ.ಹಿಂ.ವರ್ಗ:ಗಣಕ:01:2015 ದಿನಾಂಕ:08ನೇ ಏಪ್ರಿಲ್ 2015

### : ಸು ತ್ತೋ ಲೆ :

**ವಿಷಯ**: 11ನೇ ಏಪ್ರಿಲ್ 2015 ರಿಂದ ಪ್ರಾರಂಭವಾಗಬೇಕಾದ ಹಿಂದುಳಿದ ವರ್ಗಗಳ ಸಮೀಕ್ಷೆ ಬಗ್ಗೆ.

**ಉಲ್ಲೇಖ**: ಸರ್ಕಾರದ ಆದೇಶ ಸಂಖ್ಯೆ:ಇಡಿ:01:ಮಾಹಿತಿ:2015, ದಿನಾಂಕ:03.01.2015.

2] ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:21.01.2015.

3] ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ:153:ಪಿಬಿಎಸ್:2015, ದಿನಾಂಕ:31.03.2015.

4) ಸರ್ಕಾರದ ಪ್ರದಾನ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ:ಹಿಂವಾಕ14/ಪ್ರ.ಕಾ2015 ದಿ:1.4.2015

ಘಘಘಘಘ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಮೀಕ್ಷೆಯನ್ನು ದಿನಾಂಕ:11.04.2015ರಿಂದ ಪ್ರಾರಂಭಿಸಲಾಗುತ್ತಿದ್ದು, ಇದು ಗಣತಿ ಕಾರ್ಯದಷ್ಟೇ ಪ್ರಮುಖವಾದ ಕಾರ್ಯವಾಗಿದ್ದು, ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ ನಿಯಮ-24ರಂತೆ ಸರ್ಕಾರವು ಇಚ್ಚಿಸಿದ ಅಗತ್ಯ ಕಾರ್ಯವಾಗಿ ಪರಿಗಣಿಸಿ, ಕರಾರುವಕ್ಕಾದ, ಪ್ರಮಾಣೀಕೃತ ಮಾಹಿತಿಯನ್ನು ಪಡೆಯುವ ಸಲುವಾಗಿ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸೇವೆಯನ್ನು ರಜಾ ಅವಧಿಯಲ್ಲಿ ಮಾತ್ರ ಪಡೆಯಲು ಉಲ್ಲೇಖ [2]ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಇದನ್ನು ಪುನರುಚ್ಚರಿಸುತ್ತಾ, ಉಲ್ಲೇಖ [3]ರ ಸರ್ಕಾರದ ಸುತ್ತೋಲೆಯಂತೆ ಕೆ.ಸಿ.ಎಸ್.ಆರ್ ನಿಯಮ-113ರ ಉಪಬಂಧಗಳನ್ವಯ ಪರಿಶೀಲಿಸಿ ಗಣತಿ / ಸಮೀಕ್ಷೆಗೆ ನೀಡುವಂತೆ ರಜೆ ಹಾಗೂ ಇತರೆ ಸೌಲಭ್ಯಗಳನ್ನು ನೀಡಲು ಅನುಮತಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗಣತಿದಾರರ ಕೊರತೆ ಇರುವುದರಿಂದ ಉಪನಿರ್ದೇಶಕರು ಆಡಳಿತ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ರವರು ಕೂಡಲೇ ಶಿಕ್ಷಕರನ್ನು ಸಮೀಕ್ಷಾ ಕಾರ್ಯಕ್ಕೆ ನಿಯೋಜಿಸುವುದು

ಉಲ್ಲೇಖ [2]ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ತಾಲ್ಲೂಕು ನೋಡಲ್ ಅಧಿಕಾರಿಗಳನ್ನಾಗಿ ಹಾಗೂ ಉಪನಿರ್ದೇಶಕರು [ಆಡಳಿತ] ಇವರುಗಳನ್ನು ಜಿಲ್ಲಾ ನೋಡಲ್ ಅಧಿಕಾರಿಗಳನ್ನಾಗಿಸಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

**ಇವರಿಗೆ:**
**ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.**

ಪ್ರತಿ

1)ಆಯುಕ್ತರು ಬಿಬಿಎಂಪಿ ನರಸಿಂಹ ರಾಜುಚೌಕ ಬೆಂಗಳೂರು-2

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಮಾಹಿತಿಗಾಗಿ

3)ಕಚೇರಿ ಪ್ರತಿ